# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ನವೆಂಬರ್ ೨೦, ೨೦೨೩ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೨ನೇ ತುರ್ತು ಸಭೆಯ ನಡವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೩. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೪. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

| | |
|---|---|
| ೦೭. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**೨೨೨.೦೧** ಕನ್ನಡ ವಿಶ್ವವಿದ್ಯಾಲಯದ ೩೨ನೇ ನುಡಿಹಬ್ಬದ ಕುರಿತು.

**ನಿರ್ಣಯ :** ೨೨೧ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ ೨೨೧.೦೧(೪) ವಿಷಯದ ಕುರಿತು ಮರು ಪರಿಶೀಲಿಸಿ, ಪರಿಷ್ಕರಿಸಿ ಕನ್ನಡ ವಿಶ್ವವಿದ್ಯಾಲಯದ ೩೨ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ೧೦ ಮಂದಿ ಸಾಧಕರ ಪಟ್ಟಿಯನ್ನು ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

| | |
|---|---|
| ೧. ಶ್ರೀ ಕುಂ. ವೀರಭದ್ರಪ್ಪ | – ಸಾಹಿತ್ಯ |
| ೨. ಶ್ರೀ ಶಿವರಾಜ ವಿ. ಪಾಟೀಲ | – ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರು, ಸಾಹಿತ್ಯ |
| ೩. ಡಾ. ಎಸ್.ಸಿ. ಶರ್ಮ | – ಶಿಕ್ಷಣ, ತಂತ್ರಜ್ಞಾನ ಮತ್ತು ಸಂಗೀತ |
| ೪. ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು ಭಾಲ್ಕಿ ಹಿರೇಮಠ | – ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ, ಕೃಷಿ, ಪರಿಸರ |
| ೫. ಡಾ. ವಾದಿರಾಜ ದೇಶಪಾಂಡೆ | – ಸಾಹಿತ್ಯ |
| ೬. ಡಾ. ಪದ್ಮಿನಿಪ್ರಸಾದ್ | – ಖ್ಯಾತ ಮನೋವೈದ್ಯರು ಮತ್ತು ಆಪ್ತಸಲಹೆಗಾರರು |
| ೭. ಡಾ. ಬಿ.ಎ. ವಿವೇಕ ರೈ | – ಶಿಕ್ಷಣ ತಜ್ಞರು |
| ೮. ಡಾ. ಕೆ.ವಿ.ನಾರಾಯಣ | – ಶಿಕ್ಷಣ ತಜ್ಞರು |
| ೯. ಡಾ. ಟಿ.ವಿ. ಕಟ್ಟಿಮನಿ | – ಸಾಹಿತ್ಯ |
| ೧೦. ಶ್ರೀ ವೆಂಕಣ್ಣ ಚಿತ್ರಗಾರ | – ಕಲೆ–ರಥಶಿಲ್ಪ ಕಲಾವಿದರು |

೨೨೨. ೦೨ ಮಾನ್ಯ ಕುಲಪತಿಯವರ ಆದೇಶ ಸಂಖ್ಯೆ ಕವಿಹಂ/ಕುಪಆಶಾ/೨೦೨೩-೨೪/೩೨೮ ಅಕ್ಟೋಬರ್ ೦೫, ೨೦೨೩ರನ್ವಯ ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು, ಚರಿತ್ರೆ ವಿಭಾಗ ಇವರನ್ನು ಕಾರ್ಯಕಾರಿ ಸಮಿತಿ ಅನುಮೋದನೆ ನಿರೀಕ್ಷಿಸಿ ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಕಾರ್ಯಕಾರಿ ಸಮಿತಿಯ ಘಟನೋತ್ತರ ಅನುಮೋದನೆ ನೀಡುವ ಕುರಿತು.

ನಿರ್ಣಯ : ಡಾ. ವಿಜಯ್ ಪೂಣಚ್ಚ ತಂಬಂಡ, ಪ್ರಾಧ್ಯಾಪಕರು, ಚರಿತ್ರೆ ವಿಭಾಗ ಇವರನ್ನು ಕುಲಸಚಿವರನ್ನಾಗಿ ನಿಯೋಜಿಸಿರುವ ಕ್ರಮಕ್ಕೆ ಸಭೆ ಅನುಮೋದನೆ ನೀಡಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| 20/11/23 | 20/11/23 |
| ಕುಲಸಚಿವರು | ಕುಲಪತಿಗಳು |
| ಪದನಿಮಿತ್ತ ಕಾರ್ಯದರ್ಶಿ | ಅಧ್ಯಕ್ಷರು |